ಜಾರಿಗೊಳಿಸುತ್ತಿರುವ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆಯಡಿಯಲ್ಲಿ, ಸುರತ್‌ಕಲ್‌ಗೆ ಒಳಚರಂಡಿ ಯೋಜನೆಯನ್ನು ರೂಪಿಸಿದೆ. ಈ ಯೋಜನೆಗಾಗಿ 35 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಕಾಮಗಾರಿಗಳ ಟೆಂಡರುಗಳನ್ನು ಕರೆದು ಯಶಸ್ವಿ ಬಿಡ್ದುದಾರರಿಗೆ ಕಾಮಗಾರಿಗಳನ್ನು ವಹಿಸಿಕೊಡಲಾಗಿದೆ.

ಆ) ಕಾಮಗಾರಿಗಳನ್ನು ಮಳೆಗಾಲದ ನಂತರ ಸೆಪ್ಟೆಂಬರ್ 2004 ರಿಂದ ಪ್ರಾರಂಭಿಸಲಾಗುತ್ತದೆ.

669(495) : ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಾಲ್) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ಸೌಂದರ್ಯವನ್ನು ಹೆಚ್ಚಿಸಿದ ಉದ್ಯಾನವನಗಳಿಗೆ ಹೆಸರುಗಳನ್ನು ಇಡದೇ ಇರುವುದಕ್ಕೆ ಕಾರಣಗಳೇನು;

ಆ) ಈ ಉದ್ಯಾನವನಗಳಿಗೆ ಕನ್ನಡನಾಡು ನುಡಿಗಳಿಗಾಗಿ ಶ್ರಮಿಸಿದ ಮಹನೀಯರುಗಳ ಹೆಸರನ್ನಿಡಲು ಸರಕಾರ ಕ್ರಮ ಜರುಗಿಸುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಮಹಾನಗರ ಪಾಲಿಕೆಯು ವ್ಯಾಪ್ತಿಯಲ್ಲಿರುವ ಉದ್ಯಾನವನಗಳಿಗೆ ಈಗಾಗಲೇ ಮಹನೀಯರ ಹೆಸರುಗಳನ್ನು ಇಡಲಾಗಿದೆ. ಉದಾಹರಣೆಗೆ ಮಹಾತ್ಮ ಗಾಂಧಿ ಉದ್ಯಾನವನ, ಅಂಬೇಡ್ಕರ್ ಉದ್ಯಾನವನ, ಲಕ್ಷ್ಮೀದೇವಿ ಉದ್ಯಾನವನ, ಕುವೆಂಪು ಉದ್ಯಾನವನ, ಚಾಚಾ ನೆಹರು ಉದ್ಯಾನವನ, ರವೀಂದ್ರನಾಥ್ ಠಾಗೂರ್ ಉದ್ಯಾನವನ, ಸುಭಾಷ್ ಚಂದ್ರ, ಬೋಸ್ ಉದ್ಯಾನವನ, ಸರ್.ಎಂ. ವಿಶ್ವೇಶ್ವರಯ್ಯ ಉದ್ಯಾನವನ, ದಿವಂಗತ ಶ್ರೀ ಮಹಾದೇವ ಬಣಕಾರ್ ಉದ್ಯಾನವನ, ಸಂತ ಸಿದ್ಧಾರೂಢ ಉದ್ಯಾನವನ, ಎ. ಸಾಂಬಿ ಮೂರ್ತಿ ಉದ್ಯಾನವನ.

ಆ) ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯದಂತೆ ಕ್ರಮ ವಹಿಸಲಾಗುವುದು.

670(802) : ಶ್ರೀ ಕ್ಯಾಂತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ಥಾಪನೆಗೊಂಡಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದ ವತಿಯಿಂದ ಕೊಡಬೇಕಾದ ಸಹಾಯಧನದ ಬಾಕಿ ಮೊತ್ತವೆಷ್ಟು; (ವರ್ಷಾವಾರು ಮಾಹಿತಿ ನೀಡುವುದು);

ಆ) ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾಗಿರುವ ಸಹಾಯಧನವನ್ನು ಕೊಡದಿರುವುದರಿಂದ ಅವುಗಳು ಸಂಕಷ್ಟಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬ್ಯಾಂಕ್‌ಗಳ ಮೂಲಕ ಸಾಲ ಪಡೆದು ಪ್ರಾರಂಭಿಸಲಾಗಿರುವ ಕೈಗಾರಿಕೆಗಳಿಗೆ ಸರ್ಕಾರದ ವತಿಯಿಂದ ಕೊಡಬೇಕಾಗಿರುವ ಸಹಾಯಧನವನ್ನು ಬ್ಯಾಂಕ್ ಸಾಲದ ಕಂತಿಗೆ ಅಥವಾ ವಿದ್ಯುಚ್ಛಕ್ತಿ ಬಿಲ್‌ಗೆ ಬಾಕಿಗೆ ಸರಿಯಾಗಿರುವ ಸಂಬಂಧ ಸರ್ಕಾರ